Mysore K.R. Mill Textile Re-Habitation Fund

795(1109) ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) : ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

a) Whether it has come to the notice of the State Government that the Central Government has granted Re-habitation Funds to Textile Workers ;

b) If so, furnish the details of the funds granted to the K.R.Mills ;

c) Mention the details of the workers benefited in this regard;

d) If not, furnish the steps taken by the State Government in this regard ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು) :

ಅ) ಹೌದು.

ಆ) ಕೆ.ಆರ್. ಮಿಲ್ಸ್ ಗೆ ನೀಡಿರುವ ಮೊತ್ತ ರೂ. 68,72,682/-.

ಇ) ಈ ಬಗ್ಗೆ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಅನ್ವಯಿಸುವುದಿಲ್ಲ.

ತಾಲ್ಲೂಕು ಕಛೇರಿ ಭೂಮಾಪನ ಶಾಖೆ

796(122) ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

ಅ) 2009-10 ಮತ್ತು 2010-11ನೇ ಸಾಲಿನಲ್ಲಿ ಬೆಳ್ತಂಗಡಿ ತಾಲ್ಲೂಕು ಕಛೇರಿಯ ಭೂಮಾಪನ ಶಾಖೆಯಲ್ಲಿ ಪೋಡಿ ದುರಸ್ತಿಯಾಗಿ ಪಹಣಿ ಪತ್ರಿಕೆ ಇಂಡೀಕರಣಗೊಳಿಸಲು ಈವರೆವಿಗೂ ಸ್ವೀಕರಿಸಿದ ಅರ್ಜಿಗಳ ಸಂಖ್ಯೆ ಎಷ್ಟು ;

ಆ) ಎಷ್ಟು ಪ್ರಕರಣಗಳನ್ನು ಇಂಡೀಕರಣಗೊಳಿಸಲಾಗಿದೆ ; ಎಷ್ಟು ಅರ್ಜಿಗಳು ಬಾಕಿ ಇರುತ್ತವೆ ;

ಇ) ನಿವೇಶನ ಮತ್ತು ಭೂಪರಿವರ್ತಿತ ಜಾಗಗಳ ಮಾರಾಟಕ್ಕೆ ತಾಲ್ಲೂಕು ತಹಶೀಲ್ದಾರ್‌ರವರಿಂದ ನಿರಾಕ್ಷೇಪಣಾ ಪತ್ರ ಪಡೆಯುವ ಅಗತ್ಯವಿದೆಯೇ ; ಬೆಳ್ತಂಗಡಿ ತಾಲ್ಲೂಕಿನಲ್ಲಿ ಇಂತಹ ಪ್ರಕರಣಗಳಲ್ಲಿ ತಹಶೀಲ್ದಾರ್‌ರಿಂದ ನಿರಾಕ್ಷೇಪಣಾ ಪತ್ರ ಪಡೆಯುವುದನ್ನು ಅಗತ್ಯ ಪಡಿಸಲಾಗಿದೆಯೇ ?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಬೆಳ್ತಂಗಡಿ ತಾಲ್ಲೂಕು ಕಛೇರಿಯ ಭೂಮಾಪನ ಶಾಖೆಯಲ್ಲಿ ಪೋಡಿ ದುರಸ್ತಿಯಾಗಿ ಪಹಣಿ ಪತ್ರಿಕೆ ಇಂಡೀಕರಣಗೊಳಿಸಲು ಈವರೆವಿಗೂ ಸ್ವೀಕರಿಸಿದ ಅರ್ಜಿಗಳ ವಿವರ ಈ ಕೆಳಗಿನಂತಿರುತ್ತದೆ.

ವರ್ಷ	ಸ್ವೀಕರಿಸಿದ ಅರ್ಜಿಗಳ ಸಂಖ್ಯೆ
2009–10	811
2010–11	1099
ಒಟ್ಟು	1916

ಆ) ಪಹಣಿ ಇಂಡೀಕರಣಗೊಳಿಸಿದ ವಿವರ ಕೆಳಕಂಡಂತಿದೆ.

ವರ್ಷ	ಸ್ವೀಕರಿಸಿದ ಅರ್ಜಿಗಳ ಸಂಖ್ಯೆ
2009–10	811
2010–11	1077
ಒಟ್ಟು	1888

ಇಂಡೀಕರಣಗೊಳಿಸಲು ಬಾಕಿ ಇರುವ ಅರ್ಜಿಗಳ ಸಂಖ್ಯೆ : 28

ಇ) ಮೂಲತಃ ಕೃಷಿ ಉದ್ದೇಶಕ್ಕಾಗಿ ಮಂಜೂರಾಗಿರುವ ಜಮೀನುಗಳಲ್ಲಿ ಭೂಪರಿವರ್ತನೆ ಮತ್ತು ಮಾರಾಟಕ್ಕೆ ತಹಶೀಲ್ದಾರರಿಂದ ನಿರಾಕ್ಷೇಪಣಾ ಪತ್ರ ಪಡೆಯುವ ಅಗತ್ಯವಿರುತ್ತದೆ. ನಿರಾಕ್ಷೇಪಣಾ ಪತ್ರವನ್ನು ಸರ್ಕಾರದ ಸುತ್ತೋಲೆ ಸಂಖ್ಯೆ : ಕಂಇ.ಮು.ಗೇ.ಪ.99, ದಿನಾಂಕ : 2.8.1999 ಹಾಗೂ ಜಿಲ್ಲಾ ನೋಂದಣಾಧಿಕಾರಿಗಳು, ಮಂಗಳೂರು ಇವರ ಪತ್ರ ಸಂಖ್ಯೆ : ಆರ್‌ಡಿ. ಎಸ್‌ಸಿಆರ್.37/1999–2000, ದಿನಾಂಕ : 25.1.2000ರ ಆದೇಶದಂತೆ ಪಡೆಯುವುದು ಅಗತ್ಯವಾಗಿರುತ್ತದೆ.